ಅನುಬಂಧ

ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ 94-95ನೇ ಸಾಲಿನಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಕಾಮಗಾರಿಗಳು ನಿ ಒದಗಿಸಿರುವ ಹಾಗೂ ಖರ್ಚಾಗಿರುವ ಹಣದ ವಿವರಣಾ ಪಟ್ಟಿ.

ಕ್ರ. ಸಂ.	ಕಾಮಗಾರಿಯ ಹೆಸರು	ತಾಲ್ಲೂಕು	ಒದಗಿಸಿದ ಅನುದಾನ	ಖರ್ಚಾಗಿರುವ ಹಣ
1)	ಮಾರಗೊಂಡನಹಳ್ಳಿ ಬಳಿ ಹೊಸ ಕೆರೆ	ಶಿರಾ	1.00	2.38
2)	ಗಂಡಿಕೆರೆ ಬಳಿ ಹೊಸ ಕೆರೆ		1.00	1.86
3)	ಬುಕ್ಕಾಪಟ್ಟಣ ನಂದಿಹಳ್ಳಿ ಹೊಸ ಕೆರೆ	ಶಿರಾ	0.25	1.52
4)	ಮುಡಿಯಡು ತಿಮ್ಮಯ್ಯನ ಕಟ್ಟಿ ಹೊಸ ಕೆರೆ	ಶಿರಾ	0.25	-
5)	ನವಣೆ ಬೋರಿನಹಳ್ಳಿ ಬಳಿ ಒಡ್ಡು	ಶಿರಾ	0.05	1.12
6)	ಕಾರಿಲಿಂಗನಹಳ್ಳಿ ಬಳಿ ಪಿಕಪ	ಶಿರಾ	0.05	0.53
7)	ಭೂಪಸಂದ್ರ ಬಳಿ ಗಂಗಾ ಕಲ್ಯಾಣ ಯೋಜನೆ	ಶಿರಾ	0.10	0.31
8)	ಜೋಡಿತಿಮ್ಮನಹಳ್ಳಿ ಹೊಸ ಕೆರೆ		0.05	-
9)	ಯರಬಳ್ಳಿ ಹೊಸ ಕೆರೆ		0.70	-

1994-95ರಲ್ಲಿ ಮರುಪರವಾನಿಗೆ ನೀಡಿದ ವೈನ್‌ಸ್ಟೋರ್ ಮತ್ತು ಬಾರ್‌ಗಳು.

209 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1994-95ನೇ ಸಾಲಿನಲ್ಲಿ ಹೊಸದಾಗಿ ಹಾಗೂ ಮರುಪರವಾನಿಗೆ ನೀಡಿದ ವೈನ್ ಸ್ಟೋರ್ಸ್ ಹಾಗೂ ಬಾರ್‌ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ರಾಜ್ಯದಲ್ಲಿ ಬಹಳಷ್ಟು ಕಡೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ನಗರದ ಪ್ರದೇಶದಲ್ಲಿ ಆಕ್ಷೇಪಾರ್ಹ ಸ್ಥಳಗಳಿಂದ 50 ಮೀಟರ್ ಒಳಗೆ ಇರತಕ್ಕಂತಹ ಎಷ್ಟು ವೈನ್ ಶಾಪ್ ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಮರು ಪರವಾನಿಗೆ ನೀಡಲಾಗಿದೆ?

ಇ) ಹೀಗೆ ಮರು ಪರವಾನಿಗೆ ನೀಡಲು ಕಾರಣಗಳೇನು? ಇದು ಸರ್ಕಾರದ ನೀತಿಗೆ ವಿರುದ್ಧವಾಗಿಲ್ಲವೇ?

ಈ) ಹೀಗೆ ಆಕ್ಷೇಪಣಾರ್ಹ ಸ್ಥಳಗಳಲ್ಲಿನ ಬಾರ್‌ಗಳಿಗೆ /ವೈನ್ ಶಾಪ್‌ಗಳಿಗೆ ಮರುಪರವಾನಿಗೆ ನೀಡಿರುವುದರಿಂದ ಸಾರ್ವಜನಿಕರು ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದರೆ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) 1994-95ನೇ ಸಾಲಿಗೆ ಪೂರ್ಣಾವಧಿಗೆ ಒಟ್ಟು 3,617 ಮದ್ಯದಂಗಡಿಗಳು (ಸಿಎಲ್-2), 3,102 ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್-9)ಗಳಿಗೆ ಮರು ಪರವಾನಿಗೆ ಹಾಗೂ 11 ಹೊಸ ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್-9) ಅಂಗಡಿಗಳಿಗೆ ಪ್ರವಾಸೋದ್ಯಮ ಇಲಾಖೆಯ ಶಿಫಾರಸ್ಸು ಮೇರೆಗೆ ಸನ್ನದು ನೀಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ನೀಡಿರುವುದಿಲ್ಲ.

ಇ), ಈ) ಮತ್ತು ಉ) ಮೇಲಿನ ಉತ್ತರದಿಂದಾಗಿ ಇದು ಉಬ್ಭವಿಸುವುದಿಲ್ಲ.

ANNEXURE

L.A. Question No. 565

Sl. No.	District.	No.of Licences renewed for the year 1994-95		No. of licences issued afresh for the year 1994-95.
		CL-2 (Wine Shops)	CL-9 (Bars)	
1	2	3	4	5
1)	Bangalore(Urban)	804	1288	2
2)	Bangalore (Rural)	139	104	-
3)	Belgaum.	236	93	1
4)	Bellary	159	35	-
5)	Bidar	70	23	-
6)	Bijapur	182	84	2
7)	Chikmagalur	84	48	-
8)	Chitradurga	168	205	-
9)	Dakshina Kannada.	237	392	2
10)	Dharwar	180	117	2
11)	Gulbarga	161	64	1
12)	Hassan	114	54	-
13)	Kodagu	88	51	-
14)	Kolar	144	114	-
15)	Mandya	88	71	-

1	2	3	4	5
16)	Mysore	232	125	-
17)	Raichur	144	54	-
18)	Shimoga	153	82	1
19)	Tumkur	164	66	-
20)	Uttar Kannada	80	32	-
	Total	**3617**	**3102**	**11**

1993-94ನೆ ಸಾಲಿನ ಬೆಂಗಳೂರು ಜಿಲ್ಲೆಯ ಅಬಕಾರಿ ಗುತ್ತಿಗೆದಾರಿಕೆಯ ಮಾಹಿತಿ.

210- ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ನೀಡಿದ ಅಬಕಾರಿ ಗುತ್ತಿಗೆದಾರರ ಹೆಸರು ಮತ್ತು ವಿಳಾಸಗಳೇನು?

ಆ) ಸರ್ಕಾರಕ್ಕೆ ಪ್ರತಿ ತಿಂಗಳು ಬರುವ ಅಬಕಾರಿ ಆದಾಯ ಎಷ್ಟು, ಬಾಕಿ ಇರುವ ಅಬಕಾರಿ ಹಣದ ಮೊತ್ತ ಎಷ್ಟು?

ಇ) ಸರ್ಕಾರದವರು ಬಾಕಿ ವಸೂಲಾತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಶ್ರೀ ಬಿ. ಈಶ್ವರಸ್ವಾಮಿ, ನಂ. 61, ಕಿಲಾರಿ ರಸ್ತೆ, ಬೆಂಗಳೂರು ಇವರು 1993-94ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯ ಗುತ್ತಿಗೆಯನ್ನು ಪಡೆದುಕೊಂಡಿರುತ್ತಾರೆ.

ಆ) ಬೆಂಗಳೂರು ನಗರ ಜಿಲ್ಲೆಯ 1993-94ನೇ ಸಾಲಿನ ತಿಂಗಳ ಬಾಡಿಗೆ ರೂ. 6,27,00,000ಗಳು ಇರುತ್ತದೆ. ಮತ್ತು ರೂ. 10.63 ಕೋಟಿ ರೂಪಾಯಿ ಮತ್ತು ಅದಕ್ಕೆ ತಗಲುವ ಬಡ್ಡಿಯೂ ಸದರಿ ಗುತ್ತಿಗೆದಾರರಿಂದ ಬಾಕಿ ಇರುತ್ತದೆ.

ಇ) ದಿನಾಂಕ 2-2-94 ರಂದು ಸರ್ಕಾರವು ಸದರಿ ಗುತ್ತಿಗೆದಾರರಿಗೆ ನೀಡಿದ್ದ ಬೆಂಗಳೂರು ನಗರ ಜಿಲ್ಲೆಯ ಗುತ್ತಿಗೆಯನ್ನು ರದ್ದುಗೊಳಿಸಿತ್ತಲ್ಲದೆ, ಸದರಿಯವರು ನೀಡಿದ್ದ ತೇವಣಿ ರೂ. 6,27,00,000-00 ಗಳು ಈಗಾಗಲೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಉಳಿದ ಬಾಕಿ ಮೊತ್ತವು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ 1991ರಿಂದ ಇಲ್ಲಿಯ ತನಕ ನಡೆದ ಅಬಕಾರಿ ಧಾಳಿ.

211 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?